ಶ್ರೀ ಬಿ. ಎಲ್. ಗೌಡ.—ಪ್ರತಿಯೊಬ್ಬರ ಮೇಲೂ ಆಪಾದನೆ ಬಂದ ತಕ್ಷಣ ಕ್ರಮ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸರಿಯಾದ ತನಿಖೆಯಾಗುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಇಲ್ಲದಿದ್ದರೆ ಸರ್ಕಾರದವರೂ ಶಾಮೀಲಾಗಿದ್ದಾರೆ ಎಂದು ಆಪಾದನೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಸರ್ಕಾರ ಶಾಮೀಲಾಗಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಹಾಗಾದರೆ ನಿಮಗೆ ತಾಕತ್ತಿಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಬಿ. ಆರ್. ಪಾಟೀಲ್.—ನಮ್ಮ ಕಡೆ ಜೋಳ, ತೊಗರಿ, ಹತ್ತಿ, ಶೇಂಗಾ ಮತ್ತು ಗೋಧಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಈ ಬೀಜಗಳ ಬೆಲೆ ವಿಶೇಷವಾಗಿ ಜಾಸ್ತಿ ಇದೆ. ಸಾಮಾನ್ಯವಾಗಿ ಬೀಜದ ಬೆಲೆ ಜಾಸ್ತಿ ಎಂದ ತಕ್ಷಣ ಸರ್ಕಾರದ ಗಮನಕ್ಕೆ ಬರುವುದು ಭತ್ತದ ವಿಚಾರ ಮಾತ್ರ. ನಮ್ಮ ಕಡೆ ಬೆಳೆಯುವ ಆಹಾರ ಧಾನ್ಯಗಳ ಬೀಜದ ವಿಷಯ ಸರ್ಕಾರದ ಗಮನಕ್ಕೆ ಬರುವುದಿಲ್ಲ. ಹತ್ತಿ, ಶೇಂಗಾ ಮತ್ತು ಗೋಧಿ ಈ ಬೆಳೆಗಳ ಬಿತ್ತನೆ ಬೀಜದ ಬೆಲೆ ನಮ್ಮಲ್ಲಿ ಎಷ್ಟಿದೆ, ಆಂಧ್ರ ಮಂತ್ತು ಮಹಾರಾಷ್ಟ್ರದಲ್ಲಿ ಎಷ್ಟಿದೆ ಎಂಬ ಬಗ್ಗೆ ಹೋಲಿಕೆ ಮಾಡಿ ಹೇಳುವುದಕ್ಕಾಗುತ್ತದೆಯೆ ?

ಶ್ರೀ ಬಿ. ಎಲ್. ಗೌಡ.—ನಮ್ಮಲ್ಲೇ ಹೆಚ್ಚಿಗೆ ಬೆಳೆದು ಹಂಚುವ ವ್ಯವಸ್ಥೆ ಮಾಡುತ್ತಿದ್ದೇವೆ. ಮಹಾರಾಷ್ಟ್ರದಲ್ಲಿ ಎಷ್ಟಿದೆ ಎಂಬ ಅಂಕಿ ಅಂಶವನ್ನು ಪಡೆಯಲಂ ಪ್ರಯತ್ನ ಪಟ್ಟರೂ ಸಿಗಲಿಲ್ಲ. ಸಧ್ಯಕ್ಕೆ ಆ ಮಾಹಿತಿ ಇಲ್ಲ.

ಬೇವೂರು ಗ್ರಾಮದಲ್ಲಿ ಸರ್ಕಾರಿ ಗ್ರಂಥಾಲಯ ತೆಗೆಯಂವ ಬಗ್ಗೆ.

೧೪೨ ಶ್ರೀ ಮಲ್ಲಿಕಾರ್ಜುನ ಬನ್ನಿ (ಗುಳೇದಗುಡ್ಡ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಗುಳೇದಗುಡ್ಡ ಕ್ಷೇತ್ರದ ಬಾಗಲಕೋಟೆ ತಾಲ್ಲೂಕಿನ ಬೇವೂರ ಗ್ರಾಮಕ್ಕೆ ಸರ್ಕಾರಿ ಗ್ರಂಥಾಲಯ ಮಂಜೂರು ಆದರೂ ಆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರಿ ಗ್ರಂಥಾಲಯವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಬಿಜಾಪುರ ಜಿಲ್ಲಾ ಪ್ರಾಧಿಕಾರದ ೧೩ನೇ ಸಭೆಯು ದಿನಾಂಕ ೪ ಡಿಸೆಂಬರ್ ೧೯೬೨ ರಂದು ಬೇವೂರು ಗ್ರಾಮಕ್ಕೆ ಗ್ರಂಥಾಲಯ ತೆರೆಯಲು ಠರಾವು ಮಾಡಿದೆ.

ಆ) ಆದಷ್ಟು ಬೇಗ ಗ್ರಂಥಾಲಯ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಲ್ಲಿಕಾರ್ಜುನ ಬನ್ನಿ.—ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳಂ ಮಾತನಾಡುವಾಗ ಕನ್ನಡಕ್ಕೋಸ್ಕರ ತಮ್ಮ ಪಕ್ಷದ ಸದಸ್ಯರು ಪ್ರಾಣ ಕೊಡಲಿಕ್ಕೂ ಸಿದ್ಧರಿದ್ದಾರೆ ಎಂದು ಹೇಳಿದರು. ಆದರೆ ಇಲ್ಲಿ ನನ್ನ ಪ್ರಶ್ನೆಗೆ ಉತ್ತರ ಇಂಗ್ಲೀಷಿನಲ್ಲಿ ಬಂದಿದೆ ಆದರೂ ನಾನಂ ಕನ್ನಡದಲ್ಲಿ ಪ್ರಶ್ನೆ ಕೇಳುತ್ತಿದ್ದೇನೆ.

ಬೇವೂರು ಗ್ರಾಮದಲ್ಲಿ ಗ್ರಂಥಾಲಯ ತೆರೆಯಬೇಕೆಂದು ೧೯೬೨ರಲ್ಲೇ ಠರಾವು ಮಾಡಿದ್ದರೂ ಇನ್ನೂ ಪ್ರಾರಂಭವಾಗಿಲ್ಲ. ಅಲ್ಲಿ ಗ್ರಂಥಾಲಯವನ್ನು ಪ್ರಾರಂಭ ಮಾಡಬೇಕಾದರೆ ಸರ್ಕಾರಕ್ಕೆ ಇನ್ನೂ ಎಷ್ಟು ವರ್ಷಗಳು ಬೇಕಂ ?

ಶ್ರೀ ಬಿ. ರಾಚಯ್ಯ.—ಆಯಾ ಜಿಲ್ಲಾ ಪ್ರಾಧಿಕಾರದವರು ಎಲ್ಲೆಲ್ಲಿ ಗ್ರಂಥಾಲಯಂಗಳು ಬೇಕೋ ಅಲ್ಲಿ ಗ್ರಂಥಾಲಯಂಗಳನ್ನು ತೆರೆಯುವುದಕ್ಕೆ ಅವಕಾಶ ಇದೆ. ಅದಕ್ಕೆ ಬೇಕಾದ ಜಾಗ, ಕಟ್ಟಡ, ಪೀಠೋಪಕರಣಗಳು, ಪುಸ್ತಕಗಳು ಮಂತ್ತು ವಿಯತಕಾಲಿಕೆಗಳನ್ನು ಪ್ರಾಧಿಕಾರದವರೇ ಒದಗಿಸಿ ಕೊಳ್ಳುವುದಕ್ಕೆ ಅವಕಾಶವಿದೆ. ಸರ್ಕಾರದಿಂದ ಗ್ರಂಥಾಲಯಾಧಿಕಾರಿಯನ್ನೂ ಕೊಡಬಹಂದು. ಆಯಾ

ಜಿಲ್ಲಾ ಪ್ರಾಧಿಕಾರದವರಿಗೇ ಗ್ರಂಥಾಲಯವನ್ನು ಮಾಡಲು ಅವಕಾಶವಿರುವುದರಿಂದ ಆದಷ್ಟು ಬೇಗ ಮಾಡಿ ಎಂದು ಅವರಿಗೆ ತಿಳಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ ಎ ಬನ್ನಿ.—ಪ್ರತಿ ಗ್ರಾಮದಲ್ಲೂ ಗ್ರಂಥಾಲಯ ತೆರೆಯುವುದಾಗಿ ಹಿಂದೆ ತಾವು ಹೇಳಿಕೆ ಕೊಟ್ಟಿದ್ದಿರಿ. ಆ ಪ್ರಕಾರ ಪ್ರತಿ ಗ್ರಾಮಕ್ಕೂ ಗ್ರಂಥಾಲಯ ಕೊಡುವ ಯೋಜನೆ ಸರ್ಕಾರದ ಮುಂದಿದೆಯೆ ?

ಶ್ರೀ ಬಿ. ರಾಚಯ್ಯ.—ಇನ್ನು ಐದು ವರ್ಷಗಳಲ್ಲಿ ಎಲ್ಲ ಪಂಚಾಯಿತಿಗಳವರಿಗೂ ಗ್ರಂಥಾಲಯಗಳನ್ನು ಕೊಡಬೇಕೆಂಬುದು ಸರ್ಕಾರದ ಉದ್ದೇಶವಿದೆ.

ಅಧ್ಯಕ್ಷರು.— ವಿಷಿಟಿಕ್ಕೆ ಮಂತ್ರಿಗಳು ಉತ್ತರ ಬಂದಿಲ್ಲವೆಂದು ಬರೆದಿದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ಮುಂದೆ ಯಾವಾಗಲಾದರೂ ತೆಗೆದುಕೊಳ್ಳೋಣ.

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರಾಚಾರ್ಯರ ಹುದ್ದೆಗಳು ಖಾಲಿ ಇರುವ ಬಗ್ಗೆ

೨೨೪ ಶ್ರೀ ಚೌಡಾರೆಡ್ಡಿ (ಚಿಂತಾಮಣಿ) ಹಾಗೂ ಇತರರು ವಿಧಾನ ಸಭಾಸದಸ್ಯರು.—ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾಲೇಜು ಶಿಕ್ಷಣ ಇಲಾಖೆಯಲ್ಲಿ ೨೯ ಪ್ರಾಚಾರ್ಯರ ಹುದ್ದೆಗಳು ಖಾಲಿ ಇವೆ ಎಂಬುದು ನಿಜವೆ.

ಆ) ಹಾಗಿದ್ದಲ್ಲಿ ಪ್ರತಿಯೊಂದು ಪ್ರಾಚಾರ್ಯರ ಹುದ್ದೆ ಎಂದಿನಿಂದ ಯಾವ ಇಲಾಖೆ ಅಥವಾ ವಿಷಯದಲ್ಲಿ ಖಾಲಿ ಇವೆ.

ಇ) ಕಾಲೇಜು ಶಿಕ್ಷಣ ನಿರ್ದೇಶಕರು, ಆ ಇಲಾಖೆಯ ೧೬ ಉಪ ಪ್ರಾಧ್ಯಾಪಕರ ಹೆಸರುಗಳನ್ನು ಪ್ರಾಚಾರ್ಯರ ಹುದ್ದೆಗಳಿಗೆ ಮುಂಬಡ್ತಿ ಕೊಡಲು ಶಿಫಾರಸ್ಸು ಮಾಡಿರುವರೇ

ಈ) ಸರ್ಕಾರಕ್ಕೆ ಯಾವಾಗ ಶಿಫಾರಸ್ಸು ಬಂದಿದೆ.

ಉ) ೧೬ ಉಪ ಪ್ರಾಧ್ಯಾಪಕರಿಗೆ ಪ್ರಾಚಾರ್ಯರಾಗಿ ಮುಂಬಡ್ತಿ ಕೊಡಲು ಆಗಿರುವ ಅಸಾಧಾರಣ ವಿಳಂಬಕ್ಕೆ ಕಾರಣ.

ಊ) ೧೬ ಜನ ಉಪ ಪ್ರಾಧ್ಯಾಪಕರಿಗೆ ಶಿಕ್ಷಣ ಪೂರ್ವಾನ್ವಯ ಮುಂಬಡ್ತಿ ಕೊಡುತ್ತೇವೆ ಎಂಬ ಭರವಸೆ ಕೊಡಲಾಗುವುದೆ.

ಶ್ರೀ ಬಿ. ರಾಚಯ್ಯ (ವಿದ್ಯಾಸಚಿವರು).—

ಅ) ಹೌದು.

ಆ) ದಯವಿಮಾಡಿ ಅನುಬಂಧ ನೋಡಿ.

ಇ) ಹೌದು.

ಈ) ೧೯ ಸೆಪ್ಟೆಂಬರ್ ೮೩ ಮತ್ತು ೧೨ ಜನವರಿ ೮೪.

ಉ) ಉಪ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಯು ವಿಚಾರದಲ್ಲಿನ ತೊಡಕುಗಳು ಮತ್ತು ಮಾಹಿತಿಗಳ ಪರಿಶೀಲನೆ.

ಊ) ಸಧ್ಯದಲ್ಲೆ ಮುಂಬಡ್ತಿ ಆದೇಶ ಹೊರಡಿಸಲಾಗುವುದು ಅದಕ್ಕೆ ಅವ ಪೂರ್ವಾನ್ವಯವಾಗಿ ಮಾಡಲು ಸಾಧ್ಯವಿಲ್ಲ.